# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 32 ಆಸೇಇ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು,ದಿನಾಂಕ: 01-04-2009

## ಸುತ್ತೋಲೆ

ಕರ್ನಾಟಕ ಆಡಳಿತ ಸೇವೆ(KAS) ಗೆ ಸೇರಿದ ಅಧಿಕಾರಿಗಳಿಗೆ ಇದುವರೆವಿಗೂ ಯಾವುದೇ ತರಹದ ಗುರುತಿನ ಚೀಟಿಯನ್ನು ಸರ್ಕಾರದ ವತಿಯಿಂದ ನೀಡಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ವಿಧಾನಸೌಧದ ಭದ್ರತೆಯನ್ನು ಹೆಚ್ಚಿಸಿರುವ ಕಾರಣಗಳಿಂದಾಗಿ ಈ ಅಧಿಕಾರಿಗಳು ಕಛೇರಿ ಕಾರ್ಯನಿಮಿತ್ತ ವಿಧಾನಸೌಧಕ್ಕೆ ಪ್ರವೇಶಿಸಲು ತೊಂದರೆ ಯಾಗುತ್ತಿದೆ. ಹಾಗೆಯೆ ಕೇಂದ್ರಸರ್ಕಾರವು ಕರೆಯುವ ಹಲವು ಸಭೆಗಳಲ್ಲಿ ಭಾಗವಹಿಸಲು ಸಹ ಗುರುತಿನ ಚೀಟಿಯು ಅವಶ್ಯಕವಿರುವುದನ್ನು ಸರ್ಕಾರವು ಮನಗಂಡು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಗುರುತಿನ ಚೀಟಿಯನ್ನು ನೀಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಸಂಬಂಧಪಟ್ಟ ಎಲ್ಲಾ ಕೆ.ಎ.ಎಸ್. ಅಧಿಕಾರಿಗಳು ತಮ್ಮ ಇತ್ತೀಚಿನ 2 ಸ್ಟ್ಯಾಂಪ್ ಸೈಜಿನ ಭಾವಚಿತ್ರದ ಸಮೇತ ಈ ಸುತ್ತೋಲೆಯ ಜೊತೆಗೆ ಲಗತ್ತಿಸಿರುವ ನಮೂನೆಯಲ್ಲಿ ಅವಶ್ಯಕ ಮಾಹಿತಿಗಳನ್ನು ಭರ್ತಿ ಮಾಡಿ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

(ಎಂ.ಟಿ.ರೇಜು)
ಸರ್ಕಾರದ ಉಪ ಕಾರ್ಯದರ್ಶಿ,
ಸಿ.ಆ.ಸು.ಇ.(ಸೇವೆಗಳು)

ಇವರಿಗೆ:

ನಮೂನೆ

## ಗುರುತಿನ ಚೀಟಿ ಕೋರಿಕೆ ಸಂಬಂಧ ಅಧಿಕಾರಿಗಳು ಮಾಹಿತಿ ನೀಡಬೇಕಾದ ನಮೂನೆ

| | | |
|---|---|---|
| 1 | ಅಧಿಕಾರಿಯ ಹೆಸರು, ಹುಟ್ಟಿದ ದಿನಾಂಕ ಮತ್ತು ಪದನಾಮ | |
| 2 | ಸೇವೆಗೆ ಸೇರಿದ ದಿನಾಂಕ ಮತ್ತು ಈಗಿನ ವೇತನ ಶ್ರೇಣಿ/ ಗ್ರೇಡ್ | |
| 3 | ಅಧಿಕಾರಿಯವರ ಇತ್ತೀಚಿನ ಎರಡು ಸ್ಟಾಂಪ್ ಸೈಜಿನ ಭಾವಚಿತ್ರ ಲಗತ್ತಿಸಿದೆಯೇ | ಹೌದು / ಇಲ್ಲ |
| 4 | ಇ-ಮೇಲ್ ಅಡ್ರಸ್<br>ಮೊಬೈಲ್ ಫೋನ್ ನಂಬರ್ | |

ಅಧಿಕಾರಿಯ ಸಹಿ ಮತ್ತು ಮೊಹರು

### ಕಛೇರಿ ಉಪಯೋಗಕ್ಕಾಗಿ

| | | |
|---|---|---|
| 1 | ಗುರುತಿಸಿ ದೃಢೀಕರಿಸುವ ಮೇಲಾಧಿಕಾರಿಯ ಸಹಿ ಮತ್ತು ಮೊಹರು (ಗುರುತಿನ ಚೀಟಿ ವಿತರಣೆ ಸಂಬಂಧ) | |
| 2 | ಉಪ/ಕಾರ್ಯದರ್ಶಿಯವರ ಅನುಮೋದನೆ ಆದೇಶ | |
| 3 | ಷರಾ | |